ಬಗ್ಗೆ ಅಭಿಮಾನ ಪಡಬೇಕು. ಪರಿಹಾರದ ವಿಚಾರ ಹೇಳಿದರು. ಕೆಲವು ಜಿಲ್ಲೆಗಳಲ್ಲಿ ಕೊಟ್ಟಿದ್ದಾರೆ, ಕೊಟ್ಟಿಲ್ಲ ಎಂದು ಹೇಳಿದ್ದಾರೆ.

ಶ್ರೀ ಡಿ. ಎಸ್. ಮಾದಪ್ಪ : ಯಾರಿಗೆ ಪರಿಹಾರ ಸಿಗಬೇಕಾಗಿತ್ತೋ ಅವರಿಗೆ ಸಿಕ್ಕಿಲ್ಲ. ಮೂರು ಕೋಟಿ ಯೋಜನೆಯಲ್ಲಿ ಪರಿಹಾರ ಕೊಟ್ಟಿಲ್ಲ.

ಶ್ರೀ ಕೆ. ಎನ್. ನಾಗೇಗೌಡ : ಇದು 1977ರಲ್ಲಿ ಪ್ರಾಜೆಕ್ಟ್ ಎಸ್ಟಿಮೇಟ್ ಮಾಡಿದ್ದು. ಯಾವ್ಯಾವುದೋ ಕಾರಣಕ್ಕೆ ಮುಂದುವರಿಸಲಾಗಿದೆ. ಎಸ್ಟಿಮೇಟ್ ಕಾಸ್ಟ್ ಎಸ್ಕಲೇಷನ್ ಆಗಿದೆ ಕಾಸ್ಟ್ ಇನ್‌ಕ್ರೀಸ್ ಆಗಿ ಅದು ನ್ಯಾಚುರಲ್ ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಆದರೆ ಪರಿಹಾರ ಯಾರಿಗೆ ಕೊಟ್ಟಿಲ್ಲ. ಇನ್ನು ಎಲ್ಲಿ ಬಿಟ್ಟಿದ್ದಾರೆ? ಹೆಚ್ಚಿಗೆ ಪರಿಹಾರ ಯಾರು ತೆಗೆದುಕೊಂಡಿದ್ದಾರೆ? ಇದರ ಬಗ್ಗೆ ನಮ್ಮ ಸೆಕ್ರೆಟರಿಯವರನ್ನು ಕಳುಹಿಸಿ ಸಂಪೂರ್ಣವಾಗಿ ವಿಚಾರ ಮಾಡಿಸುತ್ತೇನೆ. ಮಾನ್ಯ ಕಂದಾಯ ಕಾರ್ಯದರ್ಶಿಯವರು, ಇರಿಗೇಷನ್ ಸೆಕ್ರೆಟರಿ ಇಬ್ಬರು ಕೂಡಿ ಹೋಗಿ ಎಲ್ಲಾ ಪರಿಶೀಲನೆ ಮಾಡಿ ವರದಿಯನ್ನು ಕೊಡಲು ನಾನು ಆದೇಶ ಮಾಡುತ್ತೇನೆ.

ಅಧ್ಯಕ್ಷರು : ಕಾಸ್ಟ್‌ಲಿ ಆಗಿದೆ ಎಂದು ಹೇಳಿದ್ದಾರೆ.

ಶ್ರೀ ಹೆಚ್. ಡಿ. ಬಸವರಾಜು : ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ 1977ರಲ್ಲಿ 3 ಕೋಟಿ, ಆಗಲೇ ಅಧಿಕ ವೆಚ್ಚ ಮಾಡಲ್ಪಡುವ ಕಾಮಗಾರಿ ಎಂದು ಪ್ರಸಿದ್ಧವಾಗಿತ್ತು, ಕೇವಲ 2 ಸಾವಿರ ಎಕರೆಗೆ ಈಗ ಇನ್ನೂ 3 ಕೋಟಿ ಖರ್ಚು ಮಾಡಬೇಕಾಗಿದೆ, ಅಷ್ಟು ಖರ್ಚು ಮಾಡಿದರೂ ಇನ್ನೊಂದು ಸಾವಿರ ಎಕರೆಗೆ ಆಗುವುದಿಲ್ಲ, ದಯವಿಟ್ಟು ಇದರ ಬಗ್ಗೆ ಒಂದು ಸದನ ಸಮಿತಿ ಮಾಡಿಸಿ.

ಶ್ರೀ ಡಿ. ಎಸ್. ಮಾದಪ್ಪ : ಮೊದಲು ಅಲ್ಲಿ ಸಾವಿರ ಎಕರೆ ಇರಿಗೇಟ್ ಮಾಡುತ್ತಿದ್ದರು, ಅಲ್ಲಿ ಕಟ್ಟೆ ಒಂದು ಇತ್ತು ಈಗ 17 ಕೋಟಿ ಖರ್ಚು ಮಾಡಿ ಹೆಚ್ಚಿಗೆ ಏನೂ ಕೊಟ್ಟಿಲ್ಲ, ಸ್ವಲ್ಪ ಸ್ಟ್ರೆಂಗ್ತನ್ ಆಗಿದೆ ಅಷ್ಟೇ.

ಶ್ರೀ ಕೆ. ಎನ್. ನಾಗೇಗೌಡ : ಇರಿಗೇಷನ್ ಮತ್ತು ರೆವಿನ್ಯೂ ಸೆಕ್ರೆಟರಿ ಇಬ್ಬರನ್ನೂ ಕರೆಸಿ ಎಸ್ಟಿಮೇಟ್ ಯಾಕೆ ಇನ್‌ಕ್ರೀಸಾಗಿದೆ ಅದಕ್ಕೆ ಕಾರಣವೇನು ಡಿಲೆಗೆ ಕಾರಣವೇನು, ಇಷ್ಟು ಎಸ್ಕಲೇಷನ್‌ಗೆ ಕಾರಣವೇನು; ಪರಿಹಾರ ಯಾರಿಗೆ ಹೆಚ್ಚಿಗೆ ಕೊಟ್ಟಿದ್ದಾರೆ, ಯಾರಿಗೆ ಕೊಟ್ಟಿಲ್ಲ ಇವೆಲ್ಲವನ್ನೂ ಅವರಿಂದ ತರಿಸಿ ಸದನದ ಮುಂದಿಡುತ್ತೇನೆ.

ಸವಣೂರು ತಾಲ್ಲೂಕಿನಲ್ಲಿ 110 ಕಿ.ವ್ಯಾ ವಿದ್ಯುತ್ ಸ್ಟೇಷನ್

461 - ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರು ತಾಲ್ಲೂಕು 110 ಕೆ.ವಿ. ಸ್ಟೇಷನ್ ವಿದ್ಯುತ್ ಕೇಂದ್ರವನ್ನು ಎಂದು ಪ್ರಾರಂಭ ಮಾಡಲಾಗಿದೆ? ಅದಕ್ಕೆ ತಗಲಿದ ಖರ್ಚು ಎಷ್ಟು?

ಅ) *ಸದರಿ ಕಾಮಗಾರಿಯನ್ನು ನವೆಂಬರ್ 1997ರ ಒಳಗಡೆ ಮುಗಿಸುವುದಾಗಿ ಭರವಸೆ ನೀಡಿದ್ದು, ಈವರೆವಿಗೂ ಕೆಲಸ ಮುಗಿಸದಿರಲು ಕಾರಮವೇನು?*

ಇ) *ಈ ಕಾಮಗಾರಿಗೆ ಯಾವ ಯಾವ ಭಾಗಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ? (ವಿವರ ನೀಡುವುದು)*

ಈ) *ಸವಣೂರು ತಾಲ್ಲೂಕು ಹತ್ತಿಮತ್ತೂರು ಹಾಗೂ ಶಿಗ್ಗಾಂವ್ ತಾಲ್ಲೂಕು ಬಂಕಾಪುರ ಗ್ರಾಮಗಳಲ್ಲಿ 33 ಕೆ.ವಿ. ಸ್ಟೇಷನ್ನಿನ ಪ್ರಾರಂಭ ಮಾಡಲು ಎಷ್ಟು ಜಮೀನು ಕಚ್ಚಾ ತೆಗೆದುಕೊಳ್ಳಲಾಗಿದೆ.*

ಉ) *ಈ ಕಾಮಗಾರಿಯನ್ನು ಯಾವಾಗ ಪೂರ್ಣ ಮಾಡಲಾಗುವುದು?*

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಸವಣೂರು ತಾಲ್ಲೂಕು 110 ಕೆ.ವಿ ವಿದ್ಯುತ್ ಸ್ಟೇಷನ್‌ನ್ನು 16.7.97ರಂದು ಪ್ರಾರಂಭಿಸಲಾಗಿದೆ. ಸ್ಟೇಷನ್ನಿನ ಕಾಮಗಾರಿಗೆ ತಗಲಿದ ವೆಚ್ಚ 414 ಲಕ್ಷ ರೂ.ಗಳು.

ಆ) ಈಗಾಗಲೇ ಸದ್ರಿ ಸ್ಟೇಷನ್ನಿನ ಕೆಲಸವು ಮುಗಿದಿದ್ದು, 16.7.97ರಂದು ಟೆಸ್ಟ್ ಚಾರ್ಜ್ ಮಾಡಲಾಗಿದೆ. ಸ್ಟೇಷನ್ನಿಂದ ಹೊರಡುವ ವಿತರಣಾ ಮಾರ್ಗಗಳ ಕೆಲಸವು ಪ್ರಗತಿಯಲ್ಲಿದೆ.

ಇ) 1. ಸ್ಟೇಷನ್ನಿನ ಕಾಮಗಾರಿಗಳಿಗೆ 414 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

2. ಸಂಬಂಧಪಟ್ಟ ವಿದ್ಯುತ್ ಪ್ರಸರಣಾ ಮಾರ್ಗಗಳಿಗೆ 301.34 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಈ) 1. ಸವಣೂರು ತಾಲ್ಲೂಕು ಹತ್ತಿಮತ್ತೂರು ಗ್ರಾಮದಲ್ಲಿ 33 ಕ.ವಿ. ಸ್ಟೇಷನ್‌ನ್ನು ಸ್ಥಾಪಿಸಲು 6.71 ಎಕರೆ ಜಮೀನನ್ನು ಕಚ್ಚಾ ತೆಗೆದುಕೊಳ್ಳಲಾಗಿದೆ.

2. ಶಿಗ್ಗಾಂವ್ ತಾಲ್ಲೂಕಿನ ಬಂಕಾಪುರ ಗ್ರಾಮದಲ್ಲಿ 33 ಕೆ.ವಿ. ಸ್ಟೇಷನ್‌ನ್ನು ಸ್ಥಾಪಿಸಲು ಜಮೀನು ಸ್ವಾಧೀನವಾಗಿಲ್ಲ.

ಉ) ಮಂಡಳಿಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ 9ನೇ ಯೋಜನೆಯಲ್ಲಿ ಈ ಕಾಮಗಾರಿಗಳನ್ನು ಸೇರಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಂಜುನಾಥ್ ಸಿ. ಕುನ್ನೂರು : ಅಧ್ಯಕ್ಷರೇ, ಉತ್ತರದಲ್ಲಿ ಸವಣೂರು ತಾಲ್ಲೂಕಿನಲ್ಲಿ 110 ಕೆವಿ ಸ್ಟೇಷನನ್ನು ಪ್ರಾರಂಭ ಮಾಡುವುದಾಗಿ ಮತ್ತು ನವೆಂಬರ್ 1996ರೊಳಗೆ ಮುಗಿಸುತ್ತೇವೆ ಎಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲೇ ಲೋಯೆಸ್ಟ್ ವೋಲ್ಟೆಜ್ ಪಾಕೆಟ್ ಅಂದರೆ ಶಿಗ್ಗಾಂವ್ ಮತ್ತು ಸವಣೂರು ಎಂದು ಅಧಿಕಾರಿಗಳು ತಮ್ಮ ಮೇಲಧಿಕಾರಿಗಳಿಗೆ ಈಗಾಗಲೇ ತಿಳಿಸಿದ್ದಾರೆ. ಇಂತಹ

ಪರಿಸ್ಥಿತಿ ಇರುವಾಗ ಕುಡಿಯುವ ನೀರಿಗಾಗಿ ಬೋರ್‌ವೆಲ್‌ನಿಂದ ನೀರು ಎತ್ತಲು ವೋಲ್ಟೆಜ್ ಅಲ್ಲಿ ಸಾಕಾಗುತ್ತಿಲ್ಲ. ವಿದ್ಯಾರ್ಥಿಗಳಿಗೆ ಓದಲಿಕ್ಕೆ ಆಗುತ್ತಿಲ್ಲ. ರೈತರ ಪಂಪ್‌ಸೆಟ್ ಸುಟ್ಟುಹೋಗಿವೆ. ಟ್ರಾನ್ಸ್‌ಫಾರ್ಮರ್ ಸುಟ್ಟ ಪ್ರಮಾಣ ನೋಡಿದರೆ ಇಡೀ ಜಿಲ್ಲೆಯಲ್ಲಿ ನಮ್ಮದು ಜಾಸ್ತಿ. ಇಂತಹ ಪರಿಸ್ಥಿತಿಯಿರುವಾಗ ಒಂದು ವರ್ಷದ ಹಿಂದೆಯೇ 110 ಕೆವಿ ಸ್ಟೇಷನ್ ಮುಗಿಯಬೇಕಾಗಿತ್ತು ನಂತರ 33 ಕೆವಿ ಸ್ಟೇಷನ್‌ಗೆ ಬಂಕಾಪುರ ಮತ್ತು ಹತ್ತಿಮತ್ತೂರುಗಳಲ್ಲಿ ಪ್ರಾರಂಭ ಮಾಡಲು ಐದಾರು ವರ್ಷಗಳಿಂದ ಪ್ರಸ್ತಾವನೆ ಇಲಾಖೆ ಮುಂದಿದೆ. ಅದನ್ನೂ ಕೂಡ ತಾವು ಕೈಗೆತ್ತಿಕೊಂಡಿಲ್ಲ. ಕೂಡಲೇ ಇವುಗಳನ್ನು ಕೈಗೆತ್ತಿಕೊಂಡು ಅಲ್ಲಿನ ವಿದ್ಯುತ್ ಸಮಸ್ಯೆ ಬಗೆಹರಿಸಬೇಕೆಂದು ಮಾನ್ಯ ವಿದ್ಯುತ್ ಸಚಿವರಲ್ಲಿ ಅಪೀಲ್ ಮಾಡಿಕೊಳ್ಳುತ್ತೇನೆ.

(ಗೊಂದಲ)

(ಶ್ರೀ ಮಾದಪ್ಪ, ಶ್ರೀ ಅಪ್ಪಚ್ಚು ರಂಜನ್ ಹಾಗೂ ಬಸವರಾಜು ಅವರು ಬಾವಿಯಲ್ಲಿದ್ದರು)

ಅಧ್ಯಕ್ಷರು : ಈಗ ಮಾದಪ್ಪ ಅಪಚ್ಚುರಂಜನ್ ಮತ್ತು ಬಸವರಾಜು ಗೆಳೆಯರು ಪ್ರಸ್ತಾಪಿಸಿದ ವಿಷಯದ ಬಗ್ಗೆ ಸಚಿವರು ಇಲಾಖೆ ಕಾರ್ಯದರ್ಶಿಗಳಿಗೆ ತನಿಖೆಗೆ ಒಪ್ಪಿಸುತ್ತೇವೆ ಎಂದು ಹೇಳಿದ್ದಾರೆ. ನೀರಾವರಿ ಮತ್ತು ರೆವಿನ್ಯೂ ಕಾರ್ಯದರ್ಶಿಗಳಿರುವವರು ಅತ್ಯಂತ ಪ್ರಾಮಾಣಿಕ ಅಧಿಕಾರಿಗಳಿದ್ದಾರೆ. ಎಲ್ಲೋ ಒಂದು ಹಂತದಲ್ಲಿ ನಾವು ಒಬ್ಬರನ್ನೊಬ್ಬರು ಪರಸ್ಪರ ನಂಬಬೇಕಾಗುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ : ಬಹಳ ವರ್ಷದಿಂದ ನೆನೆಗುದಿಗೆ ಬಿದ್ದ ಯೋಜನೆ. ಆ ಭಾಗದಿಂದ ಮೂವರು ಸದಸ್ಯರು ಆಯ್ಕೆಯಾಗಿ ಬಂದಿದ್ದಾರೆ, ಆ ಭಾಗದ ರೈತರ ಸಮಸ್ಯೆ ಇದೆ ಆದರಿಂದ ದಯವಿಟ್ಟು ಇದನ್ನು ಅರ್ಧ ಗಂಟೆ ಚರ್ಚೆಗೆ ಕನ್‌ವರ್ಟ್ ಮಾಡಿ.

ಅಧ್ಯಕ್ಷರು : ಅರ್ಧ ಗಂಟೆ ಚರ್ಚೆ ಬಗ್ಗೆ ಹೇಗೆ ಮಾಡೋಣ ಎಂಬುದನ್ನು ಆಮೇಲೆ ಯೋಚನೆ ಮಾಡೋಣ. ದಯಮಾಡಿ ತಾವು ಸೀಟುಗಳಿಗೆ ಬನ್ನಿ.

(ಧರಣಿ ಇದ್ದ ಶಾಸಕರುಗಳು ತಮ್ಮ ಸೀಟುಗಳಿಗೆ ಹಿಂದಿರುಗುವರು)

ಶ್ರೀ ಶರಣಬಸಪ್ಪ ದರ್ಶನಾಪುರ್ : ಅಧ್ಯಕ್ಷರೇ, ಈಗಾಗಲೇ ಸವಣೂರಿನಲ್ಲಿ 110 ಕೆವಿ ಸ್ಟೇಷನ್ ಕಂಪ್ಲೀಟಾಗಿದೆ. 11 ಕೆವಿ ಲೈನ್ ಒಂದನ್ನು ಮುಂದಿನ ತಿಂಗಳು ಕಂಪ್ಲೀಟ್ ಮಾಡಿದರೆ ಆ ಭಾಗದ ತೊಂದರೆ ನಿವಾರಣೆಯಾಗುತ್ತದೆ.

ಶ್ರೀ ಮಂಜುನಾಥ್ ಸಿ ಕುನ್ನೂರು : ಮತ್ತೆ ಬಂಕಾಪುರ ಮತ್ತು ಹತ್ತಿಮತ್ತೂರುದು ಹೇಳಲಿಲ್ಲ.

ಶ್ರೀ ಶರಣಬಸಪ್ಪ ದರ್ಶನಾಪುರ : ಹತ್ತಿಮತ್ತೂರದು ಈಗಾಗಲೇ ಲ್ಯಾಂಡ್ ಕೂಡ ಅಕ್ವೈರ್ ಮಾಡಿದ್ದೇವೆ. ಕೆಲಸ ಚಾಲೂ ಮಾಡುತ್ತೇವೆ. ಬಂಕಾಪುರದ್ದು ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ನಮ್ಮ ಬೋರ್ಡಿನಲ್ಲಿ ಇದರ ಬಗ್ಗೆ ಆದಷ್ಟು ಬೇಗ ತೀರ್ಮಾನ ಮಾಡುತ್ತೇವೆ.